# ಕನ್ನಡ ಸಾಹಿತ್ಯ ತತ್ವಪದಗಳಲ್ಲಿ ತಾತ್ವಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳು ಕುರಿತಾದ ಲಕ್ಷಣಗಳ ವಿಶ್ಲೇಷಣೆ

**ಡಾ.ಸಿ. ಟಿ. ಜಯಣ್ಣ**

ಸಹ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಎಸ್ ಜೆ ಎಂ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಿ ಡಿ ರಸ್ತೆ . ಚಿತ್ರದುರ್ಗ, ಕರ್ನಾಟಕ ರಾಜ್ಯ, ಭಾರತ

**ಸಾರಾಂಶ:**
ಕನ್ನಡ ಸಾಹಿತ್ಯದಲ್ಲಿ ತತ್ತ್ವಪದಗಳು ತಾತ್ವಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳನ್ನು ಒಳಗೊಂಡ ಜನಪರ ಗೀತೆಗಳಾಗಿವೆ. ಇವು ವೈದಿಕ ಆಚರಣೆಗಳನ್ನು ವಿರೋಧಿಸಿ, ಮಾನವೀಯ ಮೌಲ್ಯ ಮತ್ತು ಆತ್ಮಜ್ಞಾನಕ್ಕೆ ಒತ್ತು ನೀಡುತ್ತವೆ. ಪ್ರಸ್ತುತ ಲೇಖನದಲ್ಲಿ ಮನುಕುಲದ ದೈನಂದಿನ ಜೀವನೋಪಾಯದ ತಾತ್ಪರ್ಯವನ್ನು ತಿಳಿಯಲು ಅವಶ್ಯಕವಾದ ಮಾಹಿತಿಯನ್ನು ಲಕ್ಷಣಗಳ ಮೂಲಕ ಪ್ರಸ್ತಾಪಿಸಲಾಗಿದೆ.

**ಪ್ರಮುಖ ಪದಗಳು:** ಕನ್ನಡ ಸಾಹಿತ್ಯ, ತತ್ತ್ವಪದಗಳು, ತತ್ತ್ವಪದ ಪರಂಪರೆ, ತತ್ವಪದ ಸಾಹಿತ್ಯ

## ಪೀಠಿಕೆ

ತತ್ತ್ವಪದಗಳು ಕನ್ನಡದಲ್ಲಿ ಬಗೆ ಬಗೆಯ ಹೆಸರುಗಳಿಂದ ಬೆಳೆದುಕೊಂಡು ಬಂದಿವೆ. ಪರಮಾತ್ಮನ ಬಗೆಗಿನ ಅನುಭಾವ ಈ ಪದಗಳಲ್ಲಿ ವ್ಯಕ್ತಗೊಂಡುದರಿಂದ ಇದಕ್ಕೆ ಅನುಭಾವ ಪದಗಳೆಂದೂ, ಇವನ್ನು ಏಕತಾರಿಯಂತಹ ವಾದ್ಯದೊಂದಿಗೆ ಸ್ವರವೆತ್ತಿ ಹಾಡುವುದರಿಂದ ಇವಕ್ಕೆ ಸ್ವರ ವಚನಗಳೆಂದೂ, ಅಂತರಂಗದ ಅರಿವಿನ ಮೂಲಭೂತ ತತ್ತ್ವಗಳನ್ನು, ಆಧ್ಯಾತ್ಮಿಕ ತತ್ತ್ವಗಳನ್ನು ಇವು ಒಳಗೊಂಡಿರುವುದರಿಂದ ಇವಕ್ಕೆ ತತ್ತ್ವಪದಗಳೆಂದೂ, ಇವನ್ನು ಜನಸಾಮಾನ್ಯರು ಭಜನಾ ಸಂದರ್ಭದಲ್ಲಿ ಹಾಡುವುದರಿಂದ ಭಜನೆಯ ಪದಗಳೆಂದೂ ಕರೆದುಕೊಂಡು ಬರಲಾಯಿತು. ಒಟ್ಟಿನಲ್ಲಿ ಇವು ಮೌಖಿಕ ಸಾಹಿತ್ಯದ ಗಮನಾರ್ಹ ಕಾವ್ಯ ಪ್ರಕಾರಗಳಗಿವೆ ತತ್ವಪದ ಸಾಹಿತ್ಯ ಪರಂಪರೆ.

ತತ್ತ್ವಪದ ಪರಂಪರೆಯಲ್ಲಿ ಮುಪ್ಪಿನ ಷಡಕ್ಷರಿ (1500), ಚಿದಾನಂದ ಅವಧೂತರು (1750), ರಾಮಪುರದ ಬಕ್ಕಪ್ಪ (1750), ಸಾರವಾಡ ಚಿಕ್ಕಪ್ಪಯ್ಯ (1758), ಹಾಗಲವಾಡಿ ಮದ್ವೀರೆ ಸ್ವಾಮಿಗಳು (1750), ಮೈಲಾರದ

ಬಸವಲಿಂಗ ಶರಣರು (1700), ನಿಂಬರಗಿ ಮಹಾರಾಜರು (1750), ಶಂಕರಾನಂದರು (1750), ನೀರಲಕೇರಿ ಪಂಚಾಕ್ಷರಿ (1800), ಕೂಡಲೂರು ಬಸವಲಿಂಗ ಶರಣರು (1800), ಸರ್ಪಭೂಷಣ ಶಿವಯೋಗಿ (1825), ಬಾಲಲೀಲಾ ಮಹಾಂತ ಶರಣರು (1850), ಶಿಶುನಾಳ ಶರೀಫ್ ಸಾಹೇಬ (1840), ಕಡಕೋಳ ಮಡಿವಾಳಪ್ಪ (1850), ಮೊದಲಾದವರು ಪ್ರಮುಖರಾಗಿದ್ದಾರೆ. ಈ ಪರಂಪರೆಯಲ್ಲಿ ಮುಸ್ಲಿಂ ತತ್ತ್ವಪದಕಾರರ ಸಾಧನೆ ಗಮನಾರ್ಹವಾದುದು. ಕರ್ನಾಟಕದ ಉತ್ತರ ಭಾಗದಲ್ಲಿ ದೀರ್ಘಕಾಲ 'ಹಿಂದೂ-ಮುಸ್ಲಿಂ' ಎರಡೂ ಸಮುದಾಯಗಳು ಕೂಡಿ ಬಾಳುತ್ತ ಬಂದಿವೆ. ಎರಡು ಸಂಸ್ಕøತಿಗಳ ನಡುವೆ ಸಂಘರ್ಷ ಸಾಮರಸ್ಯಗಳು ಏರ್ಪಟ್ಟಿವೆ. ಮುಖ್ಯವಾಗಿ ಮುಸ್ಲಿಂ ತತ್ತ್ವಪದಕಾರರು ಎರಡು ಸಂಸ್ಕøತಿಗಳ ಸಾಮರಸ್ಯ ಮತ್ತು ಬಾಂಧವ್ಯಕ್ಕೆ ಅಪರೂಪದ ಕೊಡುಗೆ ನೀಡಿದರು. ಚನ್ನೂರ ಜಲಾಲಸಾಬ (1700), ಮೇಟ್ನಳ್ಳಿ ಹಸನಸಾಬ (1855), ಕೋಹಿನೂರ ಹಸನ (1875), ದೇಗಾವಿ ಹಜರತ್ (1917), ಮಂಜಿಲಾನ ಖಾದರಸಾಬ (1930), ಅರವಲಿ ಬಿಜಲಿ ವಸ್ತಾದಿ (1930), ಸಾವಳಗಿ ಮಹಮ್ಮದಸಾಬ (1917), ಸಾಹಿಬಣ್ಣ ತಾತಾ, ಸಾಲಗುಂದಿ ಗುರು ಖಾದರಿ ಮೊದಲಾದವರು ಹೆಸರಾಗಿದ್ದಾರೆ. ಮುಸ್ಲಿಂ ಪ್ರಭುತ್ವವಾದಿಗಳ ಆಳ್ವಿಕೆಯ ಅಧಿಕೃತ ಭಾಷೆ ಉರ್ದು ಇದ್ದುದರಿಂದ ಕನ್ನಡ ಸಾಹಿತ್ಯ ರಚನೆಗೆ ತೊಂದರೆಯಾಯಿತೆಂದು ಆಧುನಿಕರ ಹೇಳಿಕೆಗೆ ಅನುವು ಸಿಗದಂತೆ ಈ ಮುಸ್ಲಿಮ್ ತತ್ತ್ವಪದಕಾರರು ಕನ್ನಡದಲ್ಲಿ ತತ್ತ್ವಪದಗಳನ್ನು ಹಾಡಿರುವುದು ವಿಶೇಷವಾಗಿದೆ. ಹೀಗೆ ಹಲವು ನೆಲೆಯಲ್ಲಿ ಹರಿದು ಬಂದ ತತ್ತ್ವಪದ ಸಾಹಿತ್ಯ ಭಾರತವು ವಸಾಹತುಶಾಹಿ ಪ್ರಕ್ರಿಯೆಗೆ ಒಳಪಟ್ಟಿದಾಗ ಮೂಡಿ ಬಂದ ಕನ್ನಡದ ಕಾವ್ಯ ಚರಿತ್ರೆಯಲ್ಲಿ ಪ್ರತಿಷ್ಠಿತ ಸ್ಥಾನ ಪಡೆದುಕೊಳ್ಳುತ್ತಿರುವುದು ಇಲ್ಲಿ ದೇಸೀ ಅಧ್ಯಯನಗಳು ಹೆಚ್ಚು ವ್ಯಾಪಕವಾಗಿ ನಡೆದಾಗ ಸಾಧ್ಯವಾಯಿತು. ತತ್ತ್ವಪದ ಸಾಹಿತ್ಯ ನವೋದಯ ಕಾವ್ಯದ ಅಪ್ಪಟ ಮಾದರಿಗಳಿಗೆ ಪೂರಕವಾಗಿವೆ. ಸೃಜನಶೀಲ ಕಾವ್ಯದ ಎಲ್ಲ ಬಗೆಯ ಲಕ್ಷ ಲಕ್ಷಣ ರೀತಿ ನೀತಿಗಳನ್ನು ಆಗಲೇ ಕಟ್ಟಿಕೊಂಡಿದ್ದ ಈ ರಚನಕಾರರು ಎಲ್ಲ ಬಗೆಯ ವಸ್ತು ಸಂಗತಿಗಳಿಗೆ ಪ್ರತಿಸ್ಪಂದಿಸಿದರು. ಅವರ ಕವಿತೆಗಳು ಸಾಮಾಜಿಕ ಬದುಕನ್ನು, ಬದುಕಿನ ಜಂಜಾಟ, ತಾಪತ್ರಯಗಳಿಗೆ ಉತ್ತರ ರೂಪವಾಗಿ ಉದಾಹರಣ ಸಂದರ್ಭಗಳನ್ನು ಬಳಸಿಕೊಂಡು ಹಾಡಿಕೊಂಡು ಬಂದರು. ಪ್ರಕೃತಿ, ಪಕ್ಷಿ, ಪ್ರಾಣಿ, ಸೂರ್ಯ, ಚಂದ್ರ, ಹೊಳೆ ಹಳ್ಳ, ಸಾವು, ಬದುಕು ಎಲ್ಲ ಎಲ್ಲಕ್ಕೂ ಪ್ರತೀಕ, ಹೋಲಿಕೆ, ಆಧ್ಯಾತ್ಮ, ಅನುಭಾವ ಬಳಸಿ ಸರಳ, ಸುಲಭವಾಗಿ ಯಾರೂ ಹಾಡಿಕೊಂಡು ಆಡಿಕೊಂಡು ಸಂಭ್ರಮಿಸುವ ರೀತಿಯಲ್ಲಿ ಕಟ್ಟಿ ಹಾಡಿದರು. ಡಾ. ಕೆ. ಸಿ. ಶಿವಾರೆಡ್ಡಿ ಅವರ ಅಭಿಪ್ರಾಯದಂತೆ "ತತ್ತ್ವಪದಕಾರರ ಪ್ರಧಾನ ಸಾಮಗ್ರಿ ಕನ್ನಡ ಸಾಹಿತ್ಯ ಪರಂಪರೆಯ ಪ್ರಮುಖ ಚಳವಳಿಯಾದ ವಚನ ಹಾಗೂ ದಾಸ ಸಾಹಿತ್ಯದ ನೆಲೆಯಿಂದ ಬಂದದ್ದು. ಆದರೆ ಆ ಸಾಮಗ್ರಿಯನ್ನು ವರ್ತಮಾನದ ಸಂದರ್ಭವನ್ನು ಹೊರತುಪಡಿಸುವಂತೆ ಅವರು ಪುನರ್ ನಿರ್ಮಾಣ ಮಾಡುತ್ತಾರೆ. ಹೀಗಾಗಿ ತತ್ತ್ವಪದಕಾರರ ರಚನೆಗಳು ಪಾಂಡಿತ್ಯದ ಪ್ರಭಾವದಿಂದ ಪಾರಾಗಲು ಸಾಧ್ಯವಾಗದೆ ಹೋಗಿವೆ. ಆದರೂ ತತ್ತ್ವಪದಕಾರರ ಒಟ್ಟು ಸೃಷ್ಟಿ ಕನ್ನಡ ಸಂಸ್ಕøತಿಯ ಸಂದರ್ಭದಲ್ಲಿ ಗಂಭೀರವಾದ ಸೃಜನಶೀಲ ದಾಖಲೆಯಾಗಿವೆ'ಎಂದಿರುವುದು ತತ್ತ್ವಪದಕಾರರ ಹಿರಿಮೆಯನ್ನು ಸಾರಲಾಗಿದೆ.

ಆಧುನಿಕ ಕಾಲದ ಅನೇಕ ಸಂವೇದನೆಗಳಿಗೆ ತತ್ತ್ವಪದಕಾರರ ಸ್ಪಂದನವಿದೆ. 20ನೇ ಶತಮಾನದ 'ಸಂವೇದನೆ'ಯೂ ಮೌಖಿಕ ಸಾಹಿತ್ಯದಲ್ಲಿ ಮೂಡಿ ಬಂದಿದೆ. ರಾಷ್ಟ್ರೀಯವಾದ, ನಿರುದ್ಯೋಗ ಸಮಸ್ಯೆ, ವರದಕ್ಷಿಣೆ ಪಿಡುಗು, ಭ್ರಷ್ಟಾಚಾರ, ಹೋ ಟೇಲ್, ವಕೀಲ, ಕೋರ್ಟ್ ಮುಂತಾದವು ತತ್ತ್ವಪದ ಸಾಹಿತ್ಯದಲ್ಲಿ ಕುತೂಹಲಕಾರಿಯಾಗಿ ವ್ಯಕ್ತವಾಗಿದೆ. ಅಷ್ಟೇ ಏಕೆ ನವೋದಯ ಕಾವ್ಯದ ಅನೇಕ ಲಕ್ಷಣಗಳು ಕೂಡಲೂರು ಬಸಲಿಂಗಪ್ಪನ ತತ್ತ್ವಪದಗಳಲ್ಲಿ ಆಧುನಿಕತೆ ಉಂಟು ಮಾಡಿದ ಬಿಕ್ಕಟ್ಟುಗಳು ,ವಡಕಿ ತಾತಪ್ಪಯ್ಯನ ತತ್ತ್ವಪದಗಳಲ್ಲಿ ವ್ಯಕ್ತವಾಗಿವೆ. ಆಧುನಿಕರಲ್ಲದ ಆದರೆ ಆಧುನಿಕ ಕಾಲಘಟ್ಟದಲ್ಲಿ ಬದುಕಿ ಬಾಳಿದ ವಡಕಿ ತಾತಪ್ಪಯ್ಯ, ನಿಜಲಿಂಗ ಭದ್ರೇಶ್ವರ, ಶಿಲ್ಲಪ್ಪ ಮುಂತಾದ ತತ್ತ್ವಪದಕಾರರ ಸಾಹಿತ್ಯದಲ್ಲಿ ತಾಂತ್ರಿಕವಾದ ಆಧುನಿಕ ಸಂವೇದನೆಗಳಿರುವುದನ್ನು ಡಾ.ಅಮರೇಶ ನುಗಡೋಣಿ ಗುರುತಿಸಿರುವುದು ತತ್ತ್ವಪದಕಾರರು ಕನ್ನಡ ನವೋದಯದ ಮೊದಲ ಹರಿಕಾರರಾಗುತ್ತಾರೆಂಬುದು ಇನ್ನೂ ಸ್ಪಷ್ಟವಾಗುತ್ತದೆ.

## ಲಕ್ಷಣಗಳು

1. ತತ್ವಪದಗಳು ಮೌಖಿಕವೂ ಅಲ್ಲ, ಲಿಖಿತವೂ ಅಲ್ಲದ ಸಾಧಕ ಪರ್ವಗಳು: ಅವು ಅನ್ಯರಿಗೆ ಹಾಡಲು ಕಟ್ಟಿದ ರಚನೆಗಳಲ್ಲ. ತಾನೇ ಅದಾಗಲು ಕಟ್ಟಿದ್ದು. ವ್ಯಾಪಕವಾಗಿ ನಾಡಿನ ಉದ್ದಗಲಕ್ಕೂ ಇರುವ ಈ ಪರಂಪರೆಯ ತಾತ್ವಿಕ ಅಭಿವ್ಯಕ್ತಿಯ ವಿಸ್ತಾರವಾದ ಅಧ್ಯಯನವು ಈ ನಾಡ ಬದುಕಿನ ನಿಜ ಚಹರೆಗಳನ್ನು ಅರಿತುಕೊಳ್ಳಲು ಅತ್ಯಗತ್ಯವಾಗಿದೆ. ಹಿಂದೂ ಎಂದು ಈಗ ಸೂತ್ರೀಕರಿಸುತ್ತಿರುವ ಆಧ್ಯಾತ್ಮದಲ್ಲಿ ಶೂದ್ರ ಆಧ್ಯಾತ್ಮವಿಲ್ಲ. ಹಾಗಾಗಿಯೇ ಅಧಿಕೃತ ಧಾರ್ಮಿಕ ಆವರಣಗಳಲ್ಲಿ ತತ್ವಪದಗಳಿಲ್ಲ. ತತ್ವಪದಗಳ ಬದುಕಿನ ಕ್ರಮವೂ ಸಾಮೂಹಿಕವಾಗಿ ನಮ್ಮ ನಡುವೆ ಇಲ್ಲ. ಬದಲಿಗೆ ವ್ಯಕ್ತಿಗತವಾದ ಆಯ್ಕೆಯಾಗಿ ಮಾತ್ರ ಬಿಡಿ ಬಿಡಿಯಾಗಿ ಇದೆ. ನಮಗೆ ಇಂದು ಅಪರಿಚಿತವಾಗಿದೆ. ಹಾಗೆಯೇ ನಮ್ಮ ಗುರು ಮಾರ್ಗದ ಆವರಣಗಳಿಗೆ ಬರುವವರು ಯಾರು? ಅವರೆಲ್ಲ ಜಾತಿ ಧರ್ಮಗಳ ಹಂಗನ್ನು ಹರಿದುಕೊಂಡವರು. ದಾಟಿ ನಿಂತ ಆರೂಢರನ್ನು, ಅವಧೂತರನ್ನು ಯಾವ ಧರ್ಮದ ಹಂಗಿಗೂ ಮತ್ತೆ ನೂಕಲಾಗದು.
2. ತತ್ವಪದಕಾರರದ್ದು ಭಕ್ತಿ ಮಾರ್ಗವೂ ಅಲ್ಲ, ದೈವ ಮಾರ್ಗವೂ ಅಲ್ಲ: ಅದು ಗುರು ಮಾರ್ಗ. ಇವೆಲ್ಲ ಗುರು ಪಂಥಗಳು. ಇಲ್ಲಿ ಗುರುವೇ ಸರ್ವಸ್ವ. ತನ್ನ ಸಾಧನೆಗೆ ಮಾರ್ಗದರ್ಶನಕ್ಕಾಗಿ ಗುರುವೊಬ್ಬ ಬೇಕೇ ಬೇಕು. ಗುರು ಶಿವ(ಮಂಗಲ) ಸ್ವರೂಪಿಯಾದವನು. ಅರಿವಿನ ಮೂರ್ತ ರೂಪ. ವ್ಯಕ್ತಿ ರೂಪದ ಗುರು ಸಂಕೇತ ಮಾತ್ರ. ನಿಜವಾಗಿ ಅರಿವೇ ಗುರು. ದೈವ ಮಾರ್ಗ ಕಾಲ್ಪನಿಕವಾದುದು. ಗುರು ಮಾರ್ಗ ವಾಸ್ತವವಾದುದು. ಗಮನಿಸಿ ಜಗತ್ತಿನ ಮೂರು ಮಹಾ ವಿವರಣೆಗಳು ಎಂದು ಗುರುತಿಸುವ ಕ್ರೈಸ್ತ, ಇಸ್ಲಾಂ ಮತ್ತು ಹಿಂದೂ ಈ ಮೂರು ಧಾರೆಗಳಲ್ಲಿಯೂ ದೈವ ಮಾರ್ಗ ಮತ್ತು ಗುರು ಮಾರ್ಗಗಳೆರಡೂ ಇವೆ ಮತ್ತು ಎರಡರ ನಡುವೆ ತೀವ್ರವಾದ ಸಂಘರ್ಷಗಳು ಎಂದಿನಿಂದಲೂ ನಡೆದೇ ಇವೆ. ಅಧಿಕಾರ ಕೇಂದ್ರಗಳಿಗೆ, ಪಾಂಥಿಕತೆಗೆ ದೈವಮಾರ್ಗ ಪ್ರಿಯವಾದರೆ ಸಮೂಹಗಳಿಗೆ ಪ್ರಿಯವಾಗಿರುವುದು

ಗುರುಮಾರ್ಗ. ಸಮೂಹದ ಜೊತೆಗೆ ಯಾವಾಗಲೂ ಪ್ರಧಾನ ನೆಲೆಯಲ್ಲಿಲ್ಲ ಬದುಕಿರುವುದು ಗುರುಮಾರ್ಗವೇ ಆಗಿರುವುದು ವಿಶೇಷ.

3. ತತ್ವಪದಕಾರರು ಅತ್ಯಾಶ್ರಮಿಗಳು: ಅವರು ವರ್ಣಾಶ್ರಮ ವ್ಯವಸ್ಥೆಯನ್ನು, ಜಾತಿ ಸೂತಕಗಳನ್ನು ಮಾನ್ಯ ಮಾಡುವುದಿಲ್ಲ. ಲಿಂಗ ಅಸಮಾನತೆಯಾಗಲೀ, ಮುಟ್ಟು ಮೈಲಿಗೆಯಾಗಲೀ ಇಲ್ಲ. ಇಲ್ಲಿ ಎಲ್ಲರೂ ಸಮಾನರು. ಅವರಿಗೆ ಧರ್ಮದ, ಜಾತಿಯ, ಭಾಷೆಯ ಗಡಿಗಳಿಲ್ಲ. ಜಾತಿ-ಧರ್ಮದ ಎಲ್ಲೆಗಳನ್ನು ದಾಟಿದ ವಿಶ್ವಮಾನವ ಪ್ರಜ್ಞೆ ಅವರದ್ದು.
4. ಗುರುವಿನ ಮಾರ್ಗದರ್ಶನದಲ್ಲಿ ನಡೆಯುವ ಸಾಧನೆ: ಗುರುವಿನ ಮಾರ್ಗದರ್ಶನದಲ್ಲಿ ನಡೆಯುವ ಈ ಸಾಧನೆ ಹಲವು ಹಂತಗಳಲ್ಲಿ ಮಾಗುತ್ತದೆ. ಅದ್ವಯ ಸಾಧನೆಯ ಮಾರ್ಗಗಳಲ್ಲಿ ಸಾಮಾನ್ಯವಾಗಿ ಭಕ್ತಿ, ವೈರಾಗ್ಯ, ತಾರಕ, ಸಾಂಖ್ಯ ಮತ್ತು ಅಮನಸ್ಕರಾಜಯೋಗವೆಂಬ ಸ್ಥಲಕಲ್ಪನೆ ಇದೆ. ಶ್ರೀ ನಿಜಗುಣ ಶಿವಯೋಗಿ, ಬಾಲಲೀಲಾಮಹಾಂತ, ಘನಮಠದಾರ್ಯ, ಸರ್ಪಭೂಷಣಶಿವಯೋಗಿ, ಮೈಲಾರ ಬಸವಲಿಂಗಶರಣ, ಮುಂತಾದ ವೀರಶೈವ ಪರಂಪರೆಯ ತತ್ವಪದಕಾರರ ಸ್ಥಲ ಕಲ್ಪನೆಯಲ್ಲಿ ಶಿವ ಕಾರುಣ್ಯಸ್ಥಲ, ಜೀವ ಸಂಬೋಧನ ಸ್ಥಲ, ನೀತಿಕ್ರಿಯಾಚರ್ಯಸ್ಥಲ, ಯೋಗಪ್ರತಿಪಾದನಾಸ್ಥಲ, ಜ್ಞಾನ ಪ್ರತಿಪಾದನಾಸ್ಥಲ, ಎಂಬ ಸಾಧನಾ ಹಂತಗಳಿವೆ. ಅಚಲ ಪರಂಪರೆಯಲ್ಲಿ ತಾರಕ, ಸಾಂಖ್ಯ, ಅಮನಸ್ಕ, ಪರಿಪೂರ್ಣ ಎಂಬ ಕ್ರಮಾನುಗತ ಸಾಧನೆಗಳಿವೆ. ವಚನಕಾರರಲ್ಲಿರುವಂತೆ ತತ್ವಪದಕಾರರಲ್ಲಿಯೂ ಎರಡೂ ರೀತಿಯ ಮಾರ್ಗಗಳಿವೆ. ಒಂದು ವಿಹಂಗಮಾರ್ಗ ಇನ್ನೊಂದು ಪಿಪೀಲಿಕ ಮಾರ್ಗ. ವಿಹಂಗವೆಂದರೆ ಒಂದೇ ಸಾರಿ ಎಲ್ಲವನ್ನೂ ದಾಟಿ ನಿಂತ ಬಯಲ ಸಾಧಕರು. ಪಿಪೀಲಿಕರೆಂದರೆ ಕ್ರಮಾನುಗತವಾದ ಸಾಧನೆ ಮಾಡಿ ಗುರಿಮುಟ್ಟುವವರು. ಈ ಮಾರ್ಗಗಳಲ್ಲಿ ಕನಿಷ್ಟ ಶ್ರೇಷ್ಟ ಎಂಬುದಿಲ್ಲ. ಬೇರೆ ಬೇರೆ ದಾರಿಯ ಪಯಣಿಗರು ಅಷ್ಟೆ. ತತ್ವಪದ ಪರಂಪರೆಗಳಲ್ಲಿ ಅನೇಕ ಪ್ರಸ್ಥಾನಗಳಿವೆ. ನಿಜಗುಣರ ಷಟ್‌ಸ್ಥಲ, ಶಂಕರಾನಂದಯೋಗಿಗಳ ಅದ್ವೈತ, ಮಡಿವಾಳಪ್ಪನವರ ಸಹಜಮಾರ್ಗ, ಬೌದ್ಧ ಅಚಲ ಮಾರ್ಗ, ಖಾಕಿಪೀರ ಮುಂತಾದವರ ಸೂಫಿ ಮಾರ್ಗ, ಸಿದ್ಧಾರೂಢರ ಆರೂಢ ಮಾರ್ಗ, ಶಿಲವೇರಿ ಶಿವಪ್ಪ, ಅಲ್ಲೀಷಾರ್ಯರ ಗುಡಿಕಲ್ ಮಾರ್ಗ, ಚಿದಾನಂದಾವಧೂತರ ಶಾಕ್ತ ಮಾರ್ಗಗಳಿವೆ. ಒಂದೊಂದರಲ್ಲಿಯೂ ವಿವಿಧ ಹಂತದ ಸಾಧನೆಯ ಕ್ರಮವಿದೆ.
5. ಇದೊಂದು ನಡೆ-ನುಡಿ ಸಿದ್ಧಾಂತದ ಪರಂಪರೆ: ತತ್ವಪದಗಳು ಅವರ ಸಾಧನೆಯ ಹಾದಿಯ ಉಪ-ಉತ್ಪನ್ನಗಳು ಮಾತ್ರ. ಮೊದಲು ನಡೆ ನಂತರ ನುಡಿ. ತತ್ವಪದಕಾರರಿಗೆ ಸಂಸಾರ ನಿಷಿದ್ಧವಲ್ಲ. ಅವರೂ ಎಲ್ಲರಂತೆ ಕುಟುಂಬಿಗಳು. ಕುಟುಂಬದ ಪ್ರೀತಿ-ವಿಶ್ವಾಸಗಳನ್ನು ಗೌರವಿಸುತ್ತಾರೆ. ಸಂಸಾರದೊಳಗಿದ್ದೇ ಪರಮಾರ್ಥವನ್ನು ಕಾಣಬಹುದೆಂದು ನಂಬುತ್ತಾರೆ. ಅದೊಂದು ಸಾಧನೆಯ ಯಾನ. ಇದು ಕೇವಲ ವ್ಯಕ್ತಿಗತವಾದ ಬಿಡುಗಡೆಗೆ ಸೀಮಿತವಾದದ್ದಲ್ಲ. ಬದಲಿಗೆ ಜೀವನ ಕ್ರಮವೊಂದರಲ್ಲಿ ಸಮೂಹಗಳು ಪಾಲ್ಗೊಳ್ಳುವ ಮೂಲಕ ಕಾಣುವ ಬಿಡುಗಡೆ. ಇದೊಂದು ಅರಿವಿನ ಪ್ರಯಾಣ.

6. ಮೀಮಾಂಸೆಯ ದೃಷ್ಟಿಯಿಂದ ಗಮನಿಸಬೇಕಾದ ಅಂಶವೊಂದಿದೆ: ತತ್ವಪದಗಳು ದೇಸೀ ಆಧ್ಯಾತ್ಮ ಸಂಸ್ಕೃತ ಅಥವಾ ಭಾರತೀಯ ಕಾವ್ಯ ಮೀಮಾಂಸೆಯ ನಿಲುವುಗಳನ್ನು ತಿರಸ್ಕರಿಸುತ್ತದೆ. ಸಂಸ್ಕೃತ ಕಾವ್ಯ ಮೀಮಾಂಸೆಯು ಶ್ರೇಷ್ಠತೆಯನ್ನು ದೇಹದಿಂದ ಆತ್ಮಕ್ಕೆ, ದೇಹದಿಂದ ದೇವಾಲಯಕ್ಕೆ, ಪ್ರೇಮದಿಂದ ಭಕ್ತಿಗೆ, ಬಯಲಿನಿಂದ ಸ್ಥಾವರಕ್ಕೆ ವರ್ಗಾಯಿಸಿತು. ಶ್ರಮಣಧಾರೆಗಳು ಮೀಮಾಂಸೆಯನ್ನು ಸಮೂಹ ಪರವಾಗಿಸಲು ಆತ್ಮತತ್ವದಿಂದ ಕಾಯತತ್ವಕ್ಕೆ, ದೇವಾಲಯದಿಂದ ದೇಹಕ್ಕೆ, ಭಕ್ತಿಯಿಂದ ಪ್ರೇಮಕ್ಕೆ, ಸ್ಥಾವರದ ಬಂಧನದಿಂದ ಬಯಲಿಗೆ ವರ್ಗಾಯಿಸಿದವು. ಒಂದರ ಪ್ರಯಾಣ ಏಕಾಧಿಕಾರದ ಕಡೆಗಾದರೆ ಇನ್ನೊಂದು ಸಮೂಹ ಮತ್ತು ಪ್ರಜಾಪ್ರಭುತ್ವದ ಕಡೆಗೆ. ಇಲ್ಲಿ ಅನೇಕಗಳಿಂದ ಅನೇಕಗಳಾಗುವ ಬಹುತ್ವವೇ ಲಕ್ಷಣ. ಅಲ್ಲಿ ಅನೇಕಗಳನ್ನು ಒಂದಾಗಿಸಿ ಅಂತಿಮವಾಗಿ ಏಕಾಧಿಪತ್ಯದ ಕಡೆಗೆ ಸಾಗುವುದು ಸಂಸ್ಕೃತ ಮೀಮಾಂಸೆಯ ಲಕ್ಷಣ. ತತ್ವಪದಕಾರರು ಅನೇಕ ಪಾಂಥಿಕ ಮೂಲಗಳಿಂದ ತಮ್ಮ ತಾತ್ವಿಕತೆಯನ್ನು ಕಟ್ಟಿಕೊಂಡವರು. ಅವರೆಲ್ಲ ಪ್ರಧಾನವಾಗಿ ಸಿದ್ಧ ಪರಂಪರೆಯವರು. ಸಿದ್ಧರೆಂದರೆ ಪ್ರತಿಕ್ಷಣವೂ ತಮ್ಮ ವಿವೇಕವನ್ನು ಎಚ್ಚರವಾಗಿಟ್ಟುಕೊಂಡಿರುವ ಬುದ್ಧ ಪ್ರಜ್ಞೆಯವರು. ಈ ಕ್ಷಣದ ಸತ್ಯವೇ ಇಲ್ಲಿಯ ನೆಲೆ. ಯಾರು ಅಪ್ಪ ಯಾರು ಅವ್ವ, ಯಾವ ಜಾತಿ, ಯಾವ ಊರು, ಎಲ್ಲವೂ ಇಲ್ಲಿ ನಗಣ್ಯ. ಈ ಕ್ಷಣಕ್ಕೆ ನೀನು ಏನು ಎನ್ನುವುದಷ್ಟೆ ವಾಸ್ತವ. ತತ್ವಪದಗಳಲ್ಲಿ ಹೇಳಿರುವುದೇನು ಎನ್ನುವುದರಷ್ಟೆ ಮಹತ್ವದ ಸಂಗತಿ ಅವರು ಯಾವುದನ್ನು ಕುರಿತು ಹೇಳಲಿಲ್ಲ ಎನ್ನುವುದು. ಮಹಾವ್ಯಾಖ್ಯಾನಗಳ ಬಗೆಗೆ ಅವರು ತಾಳಿರುವ ಮೌನ ಸಾಮಾನ್ಯ ಮೌನವಲ್ಲ. ತಪ್ಪಿಯೂ ಅವರು ಮಹಾಭಾರತ ರಾಮಾಯಣಗಳ ಕುರಿತು ಮಾತಾಡಿಲ್ಲ ಎನ್ನುವುದು ಕೂಡ ಗಮನಿಸಬೇಕಾದ ಸಂಗತಿ. ವಚನಕಾರರು ಕೂಡ ಇಂತಹ ಮಹಾವ್ಯಾಖ್ಯಾನಗಳ ಕುರಿತು ಮಾತಾಡಿಲ್ಲ. ಪುರಾಣಗಳು, ಪ್ರಮಾಣ ಗ್ರಂಥಗಳು, ಇವು ಯಾವುವೂ ತತ್ವಪದಕಾರರಲ್ಲಿ ಜಾಗ ಪಡೆಯಲು ಸಾಧ್ಯವಾಗಿಲ್ಲ.
7. ತತ್ವಪದಕಾರರ ಪರಂಪರೆಯು ಜೀವಂತ ಪರಂಪರೆಯಾಗಿದೆ: ತತ್ವಪದಕಾರರ ಪರಂಪರೆಯು ಜೀವಂತ ಪರಂಪರೆಯಾಗಿರುವುದರಿಂದ ಈ ಪಂಥದ ಆಚರಣೆ, ವಿಧಿನಿಷೇಧಗಳು ಮತ್ತು ಯಥೇಚ್ಛವಾಗಿ ದೊರಕುವ ಸಾಹಿತ್ಯವು ಈ ಪಂಥದ ತಾತ್ವಿಕತೆಯನ್ನು ಅರಿತುಕೊಳ್ಳಲು ಸಹಾಯ ಮಾಡುತ್ತವೆ. ಒಂದೊಂದು ಧಾರೆಯ ತಾತ್ವಿಕ ನಿಲುವುಗಳು, ಆಚರಣೆಗಳು, ಅಭಿವ್ಯಕ್ತಿ, ಆಯಾ ಪಂಥಗಳ ವಿಶಿಷ್ಟ ಸಂಗತಿಯಾಗಿರುತ್ತದೆ. ಈ ಧಾರೆಗಳ ನಡುವೆ ಅನೇಕ ಸಮಾನ ಅಂಶಗಳಿರುವುದಾದರೂ ತಮ್ಮ ತಮ್ಮ ಧಾರೆಗಳ ಪ್ರತ್ಯೇಕತೆಯನ್ನು ಎಚ್ಚರದಿಂದ ಕಾಯ್ದುಕೊಳ್ಳುತ್ತಾರೆ.
8. ತತ್ವಪದಗಳ ಓದು ಅನುಸಂಧಾನ ಎಲ್ಲರಿಗೆ ಸಾಧ್ಯವಿಲ್ಲ: ತತ್ವಪದಗಳ ಅಲ್ಲಿಯ ಪರಿಭಾಷೆ ಸಾಮಾನ್ಯರಿಗೆ ಪ್ರವೇಶವನ್ನು ನೀಡುವುದಿಲ್ಲ. ಅವೆಲ್ಲ ಬಹುಪಾಲು ಬೆಡಗಿನ ರಚನೆಗಳು. ವಚನ ಮತ್ತು ತತ್ವಪದಗಳಲ್ಲಿನ ಬೆಡಗಿನ ಪ್ರಯೋಗವನ್ನು ಇದುವರೆಗೆ ಧ್ವನಿ ಪ್ರಸ್ಥಾನದ ಹಿನ್ನಲೆಯಲ್ಲಿ ಚರ್ಚಿಸುತ್ತಿರುವುದನ್ನು ನೋಡಬಹುದು. ಆದರೆ ನಿರಸನ ಪ್ರಕ್ರಿಯೆಯನ್ನು ತನ್ನ

ಮಾರ್ಗವಾಗಿಸಿಕೊಂಡ ತತ್ವಪದಕಾರರ ಪರಂಪರೆಗೆ ಭಾಷೆ ಅನೇಕ ಮಿತಿಗಳನ್ನು ಒಡ್ಡಿತು. ರಚನೆಗಳನ್ನಷ್ಟೇ ನುಡಿದು ಗೊತ್ತಿರುವ ಭಾಷೆಗೆ ನಿರಚನೆಯನ್ನು ನುಡಿಯಲು ಕಲಿಸುವ ಜವಾಬ್ದಾರಿ ಕೂಡ ಶ್ರಮಣ ಧಾರೆಗಳ ಮೇಲೆ ಬಿತ್ತು. ಹಾಗಾಗಿ ಶ್ರಮಣ ಧಾರೆಗಳು ಜಾಡಿಗೆ ಬಿದ್ದಿದ್ದ ಭಾಷೆಯನ್ನು ಚಲನಶೀಲವಾಗಿಸಿ ಭಿನ್ನದಾರಿ ಹಿಡಿಯುವಂತೆ ಮಾಡಲು ಸಂಧಾಭಾಷೆ, ಉಲಟ್ ಭಾಂಸಿ, ಬೆಡಗು ಮುಂಡಿಗೆಗಳು ಮುಂತಾದ ಪ್ರಯೋಗಗಳನ್ನು ಮಾಡಿದರು. ಅದಕ್ಕಾಗಿ ಹೊಸ ರೂಪಕಗಳ ಜಗತ್ತನ್ನು ಅನಾವರಣ ಮಾಡಿದರು. ಹೀಗೆ ಭಾಷೆಗೆ ಹೊಸ ನಡಿಗೆಯನ್ನು ಕಲಿಸಿ ತಮ್ಮ ದಾರಿಗೆ ಅದನ್ನು ಒಗ್ಗಿಸಿಕೊಳ್ಳುವ ಕೆಲಸವನ್ನೂ ಅವರು ಮಾಡಬೇಕಾಯಿತು. ಅಂತಹ ರೂಪಕಗಳ ಮಾದರಿ ಇದು:

ಹಾದರ ಮಾಡಿದೆನಕ್ಕಾ ಎನ್ನ
ಮೋದದಿ ಸಲಹುವ ಮಹರಾಯ ಸಿಕ್ಕ ||ಪ||
ಅತ್ತೆಯು ಕತ್ತೆಯಂಥವಳು ಎನ್ನ
ಕತ್ತು ಹಿಡಿದು ನಿತ್ಯ ಲತ್ತೆ ಹಾಕುವಳು
ಎತ್ತೆತ್ತಿ ಕೂಳು ಹಾಕುವಳೂ
ಅವಳ ಹತ್ತಿರ ಇರಲಾರದ್ಹೋಗಿ ನಾ ||೧'|
ಮಂಡಲ ಚಂದ್ರುಲಾಪುರಧೀಶನಕ್ಕಾ ಅವ
ಭಂಡ ಗಂಡನ ತಾಳಿ ಹರಿಸಿ ತಾ ನಕ್ಕ
ಮಂಡಲದೊಳಗಿನ ಚೊಕ್ಕ
ನೀ ಕಂಡಲ್ಲೇ ಹೇಳಿದೆ ಖಂಡಿತ ಲೆಕ್ಕಾ ||೨|| (ಅಜ್ಞಾತ ತತ್ವಪದಕಾರ)

ಇಲ್ಲಿಯ ಪಾರಿಭಾಷಿಕ ಪದಗಳಿಗೆ ನಿರ್ದಿಷ್ಟ ಅರ್ಥವಿದ್ದು ಅವುಗಳ ನಿತ್ಯಾನುಸಂಧಾನಿಗೆ ಮಾತ್ರ ಸುಲಭ ಸಾಧ್ಯವಾಗುವಂತೆ ಅವರು ಭಾಷೆಯನ್ನು ಮುರಿದುಕಟ್ಟುತ್ತಾರೆ. ಕೆಲವು ಕಡೆ ತೀರಾ ಸರಳ ರಚನೆಗಳಿದ್ದು ನೇರ ವಿವೇಕದ ಮಾತುಗಳಿರುತ್ತವೆ. ಉದಾ:

ಹೆಣ್ಣು ಕೆಟ್ಟದ್ದೆಂಬುದೇತಕೆ | ಕಣ್ಣು ಕೆಟ್ಟದ್ದಲ್ಲವೆ
ಹೆಣ್ಣು ಲೋಕದ ಮಾತೆಯೆಂಬುವು
ದನ್ನು ಭಾವದೊಳರಿಯದೆ ||ಪ||
ಹಣವು ಕೆಟ್ಟದ್ದೆಂಬುದೇತಕೆ |ಗುಣವು ಕೆಟ್ಟದ್ದಲ್ಲವೆ
ಹಣವು ಮಾನವನೇಳ್ಗೆ ಮಿಗೆ ಸಾ
ಧನಮದೆಂಬುದನರಿಯದೆ ||೧|
ಭೂಮಿ ಕೆಟ್ಟದ್ದೆಂಬುದೇತಕೆ | ನೇಮ ಕೆಟ್ಟದ್ದಲ್ಲವೆ
ಭೂಮಿ ಜನಕಾಶ್ರಯಮದಾಗಿಹ
ಸೀಮೆಯೆಂಬುದನರಿಯದೆ ||೨||
ಕೆಟ್ಟದೆಂಬುವುದೆಲ್ಲ ನಿನ್ನಯ | ಕೆಟ್ಟಬುದ್ದಿಯಲಿರುವುದು

ದಿಟ್ಟ ಗುರು ಬಸವಂತನುಸುರಿದ

ಗುಟ್ಟು ತಿಳಿದಾಚರಿಪುದು ||೩||

ಇಂತಹ ಸರಳ ಆದರೆ ಗಂಭೀರ ರಚನೆಗಳೂ ಇವೆ. ತತ್ವಪದಗಳು ಸಾಧನೆಗೆ ಕಟ್ಟಿಕೊಂಡ ರಚನೆಗಳೇ ಹೊರತು ಹಾಡಿ ಮೆಚ್ಚಿಸಲಿಕ್ಕೆ ಕಟ್ಟಿದವುಗಳಲ್ಲ. ಅವುಗಳನ್ನು ಕಣ್ಣುಮುಚ್ಚಿ ಹಾಡುವ ಸಾಧಕನು ತನ್ನೊಳಗನ್ನು ಶೋಧಿಸುವ ಉದ್ಯೋಗಕ್ಕೆ ಇವುಗಳನ್ನು ಬಳಸಿಕೊಳ್ಳುವನೇ ಹೊರತು, ಹೊರಗಿನವರು ಕೇಳಲಿ ಎಂದಲ್ಲ.

ಕರಾವಳಿಯ ಐದಾರು ಜಿಲ್ಲೆಗಳ ಹೊರತಾಗಿ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಮತ್ತು ಗಡಿನಾಡಿನ ಭಾಗಗಳಲ್ಲಿ ಕರ್ನಾಟಕದಾಚೆಗೂ ಕನ್ನಡ ತತ್ವಪದಗಳು ವಿಸ್ತರಿಸಿಕೊಂಡಿವೆ. ಹಾಗೆಯೇ ತತ್ವಪದಕಾರರ ಪರಂಪರೆ ಕರ್ನಾಟಕಕ್ಕೆ ಸೀಮಿತವಾಗಿರುವ ಪ್ರಕಾರವಲ್ಲ. ಆಂಧ್ರಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ತತ್ವಪದಗಳಿರುವುದರಿಂದ ಈ ನಾಡಿನ ಭಾಷೆಗಳೊಡನೆ ಕನ್ನಡ ತತ್ವಪದಗಳ ಕೊಳು-ಪಡೆ ನಡೆದಿದೆ. ತೆಲುಗು, ತಮಿಳು, ಮರಾಠಿ ಮತ್ತು ಉರ್ದು ತತ್ವಪದಗಳು ಕನ್ನಡನಾಡಿನೊಳಕ್ಕೂ, ಕನ್ನಡದ ತತ್ವಪದಗಳು ಈ ಸೋದರ ನೆಲದೊಳಕ್ಕೂ ಹೊಕ್ಕು ಬಳಕೆ ಮಾಡಿವೆ. ಇದೊಂದು ರೀತಿಯ ಗುಪ್ತಪಂಥವಾಗಿರುವುದರಿಂದ ಮುಖ್ಯವಾಹಿನಿಯೆನಿಸಿಕೊಳ್ಳದೆ ಅಜ್ಞಾತವಾಗಿ ಉಳಿದಿದೆ. ನಾಡಿನಾದ್ಯಂತ ಸಾವಿರಾರು ಗದ್ದುಗೆಗಳು, ಹಾಳು ಮಂಟಪಗಳು, ಗುಡ್ಡಬೆಟ್ಟಗಳು, ತತ್ವಪದಕಾರರ ತಾಣಗಳಾಗಿವೆ. ಭಾರತೀಯ ಅನುಭಾವ ಪರಂಪರೆಯ ವಾರಸುದಾರಿಕೆ ಇರುವುದು ಇಂದೂ ಜೀವಂತವಾಗಿರುವ ತತ್ವಪದ ಪರಂಪರೆಗೆ ಎನ್ನುವುದಂತೂ ನಿಶ್ಚಿತವಾದುದು.

**ಪರಾಮರ್ಶನ ಗ್ರಂಥಗಳು:**

೧. ಸಂತರು ಶರಣರು-ಸಾಹಿತ್ಯ ಪರಿಷತ್ತು ಎಚ್. ತಿಪ್ಪೇರುದ್ರಸ್ವಾಮಿ

೨. ತತ್ವಪದಕಾರರು ಎಲ್ಲ ಜಾತೀಯ ಮರಗಳ ಕಾಡು ಎಚ್. ಎಸ್. ವೆಂಕಟೇಶಮೂರ್ತಿಯವರ ಲೇಖನ

೩. ಪುರಂದರದಾಸರು ಸಾಹಿತ್ಯ ಅಕಾಡೆಮಿ, ನವದೆಹಲಿ, ವರದರಾಜಜಿ

೪. ಸಾಮಾಜಿಕ ಚಳುವಳಿಗಳು - ರೈ ಮಣಿಪಾಲ್ ನವಕರ್ನಾಟಕ ಪ್ರಕಾಶನ, ಬೆಂಗಳೂರು

೫. ಅನುಭಾವ ಸಾಂಸ್ಕೃತಿಕ ಹುಡುಕಾಟ - ಡಾ. ಬಸವರಾಜ ಕಲ್ಗುಡಿ

೬. ತತ್ವಪದಕಾರರು - ರಹಮತ ತರೀಕೆರೆ ಲೇಖನ